# ಹರಿನಾಮ ಕೀರ್ತನೆ ಅನುದಿನ ಮಾಳ್ಪಗೆ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 58.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 318.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 267.
4. **Note:** Lyrics given without highlights are as per Ref. 2. Lyrics in Ref. 3 are same as in Ref. 2. The wordings in Ref. 1 are slightly different than Ref. 2 and these differences are given in yellow highlights. Other minor differences are not considered here.
5. **Note:** Also, in Ref. 2, anupallavi (ll ap ll / || ಅಪ ||) is extra. This is missing in Ref. 3. This song starts like "nAma kIrtane anudina mALpage" in Ref. 2 and Ref. 3 & are listed like that.
6. **Note:** Singer has followed lyrics as in Ref. 2.
7. **Note:** Also, this song is also listed both in "hari nAma kIrtane anudina mALpage" and in "nAma kIrtane anudina mALpage"

ರಾಗ: ಧನ್ಯಾಸಿ ತಾಳ: ಆದಿ

ನಾಮ ಕೀರ್ತನೆ ಅನುದಿನ ಮಾಳ್ಪಗೆ (ಹರಿ ನಾಮ ಕೀರ್ತನೆ ಅನುದಿನ ಮಾಳ್ಪಗೆ)
ನರಕ ಭಯಗಳುಂಟೇ || ಪ ||

ನಾಮವೊಂದೇ ಯಮನಾಳ್ಗಳನೊದೆದು
ಅಜಮಿಳನಿಗೆ ಸುಕ್ಷೇಮವಿತ್ತ ಹರಿ || ಅಪ ||

ಕೇಸರಿಗಂಜದ ಮೃಗವುಂಟೇ ದಿ-
ನೇಶನಿಗಂಜದ ತಮವುಂಟೇ
ವಾಸುದೇವ ವೈಕುಂಠ ಜಗನ್ಮಯ
ಕೇಶವ ಕೃಷ್ಣಾ ನೀನೆಂದುಚ್ಚರಿಸುವ || ೧ ||

ಕುಲಿಶವನೆ ದುರಿಪ ಗಿರಿಯುಂಟೇ, ಬಲು
ಪ್ರಳಯ ಬಂದಾಗ ಜೀವಿಪರುಂಟೇ
ಜಲಜನಾಭ ಗೋವಿಂದ ಜನಾರ್ದನ
ಕಲುಷ ಹರಣ ಕರಿರಾಜ ವರದನೆಂದು || ೨ || (ಕಲುಷ ಹರಣ ಕರಿರಾಜ ರಕ್ಷಕನೆಂಬ)

ಗರುಡಗೆ ಅಂಜದ ಫಣಿಯುಂಟೇ, ದ-
ಳ್ಳುರಿಯಲಿ ಬೇಯದ ತೃಣವುಂಟೇ
ನರಹರಿ ನಾರಾಯಣ ದಾಮೋದರ (ನರಹರಿ ನಾರಾಯಣ ಕೃಷ್ಣ ಕೇಶವ)
ಪುರಂದರ ವಿಠಲ ನೀನೆಂದುಚ್ಚರಿಸುವ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಹರಿನಾಮ ಕೀರ್ತನೆಯು ನರಕ ಭಯವನ್ನು ಬಿಡಿಸುವುದೆಂಬುದಕ್ಕೆ ಇಲ್ಲಿ ಅನೇಕ ಉದಾಹರಣೆಗಳಿಂದ, ಉಪಮೇಯಗಳಿಂದ ಸಿದ್ಧಪಡಿಸಲಾಗಿದೆ.

**ಕೇಸರಿ** – ಸಿಂಹ.

**ಮೃಗ** = ಜಿಂಕೆ

**ದಿನೇಶ** – ಸೂರ್ಯ.

**ಕುಲಿಶ** – ವಜ್ರಾಯುಧ.

**ಕಲುಷ** = ಪಾಪ, ದೋಷ,

**ಬಲು ಪ್ರಳಯ** – ಮಹಾ ಪ್ರಳಯ.

**ಫಣಿ** – ಹಾವು (ಹೆಡೆಯುಳ್ಳದ್ದು).

**ದಳ್ಳುರಿ** – ಕಾಡುಕಿಚ್ಚು, ಬೇಗೆ

**Classification:** Keerthane
**Ankita:** purandara vittala
**Location:** NA
**Category:** Mahtmya Jnana, Nama Smarane, Nama Mahtme
**Sub-Category:** Krishna, naraka, bhaya, yama, ajamila, gaja, simha, vaikunta, keshava, parvata, pralaya, jiva, govinda, garuda, uraga, hullu, agni, Narasimha, Narayana, surya, jinke, papa,
**Pravachana:** NA
**Explanation:** NA